ಒಂದಾಣೆ ಮಾಲೆ. **151**

ಲೋಕಮಾನ್ಯ

ಬಾಲಗಂಗಾಧರ ತಿಲಕ



ಜನನ: 23-7-1856. ಲೋಕಮಾನ್ಯ ತಿಲಕರು. ನಿಧನ: 1-8-1920.

ಲೇಖಕ: ಶ್ರೀ| ಎಮ್. ರಘುನಂದನರಾವ್.

1957 ○ ಬೆಲೆ: ಆಣೆ ೧.

ಒಂದಾಣೆ ಮಾಲೆ — ಮಂಗಳೂರು.

ಇಪ್ಪತ್ತೊಂಭತ್ತು ಏಕಾಂಕ ನಾಟಕಗಳು.

(ಕೆಲವು 16+4 ಪುಟಗಳು; ಮತ್ತೆ ಕೆಲವು 20+4 ಪುಟಗಳು)

'ಒಂದಾಣೆ ಮಾಲೆ'ಯಲ್ಲಿ ಪ್ರಕಟವಾದ ಮೂವತ್ತು

ಏಕಾಂಕನಾಟಕಗಳಲ್ಲಿ ಈ ಕೆಳಗಿನವು(ಇಪ್ಪತ್ತೊಂಭತ್ತು)ದೊರೆವವು

೧	ನಾರೀಶ್ವರರು (ಪ್ರಹಸನ)	ಕುಡ್ಪಿ ವಾಸುದೇವ ಶೆಣೈ.
೨	ಬಾಬಿಗೆ ಬಾಸಿಂಗ ,,	,, ,, ,,
೩	ಸತ್ಯವಂತ ಬಾಬಿ ,,	,, ,, ,,
೪	ಮರ್ಜಿ ,,	ಡಾ। ಎಚ್. ಎನ್. ಕಾಮತ್.
೫	ಸತೀ ಸಾವಿತ್ರಿ (ಪೌರಾಣಿಕ)	ಶ್ರೀ। ಪಿ ವೆಂಕಟ್ರಮಣ ಭಟ್ಟ.
೬	ಅಕಾಂಡ ತಾಂಡವ (ರೇಡಿಯೊನಾಟಕ)	ಶ್ರೀ। ಬಿ ದಾಮೋದರ ಬಾಳಿಗ, ಬಿ ಎ
೭	ಮೀರಾಬಾಯಿ (ಐತಿಹಾಸಿಕ)	ಶ್ರೀ। ಸಂ. ಜ. ರಾವ್.
೮	ಚುಟ್ಟಿ ಬಿಟ್ಟಿ ದಿಟ್ಟಿ (ಪ್ರಹಸನ)	ಡಾ। ಎಸ್. ಪಿ ಭಟ್.
೯	ಜರಾಸಂಧ ವಧೆ (ಪೌರಾಣಿಕ)	ಶ್ರೀ। ಎ. ವಿ. ಮಯ್ಯ.
೧೦	ಸತ್ಯಹರಿಶ್ಚಂದ್ರ (ಪೌರಾಣಿಕ)	ಶ್ರೀ। ಪಿ ವೆಂಕಟ್ರಮಣ ಭಟ್ಟ.
೧೧	ಮಾಯಾಮೃಗ (,,)	ಶ್ರೀ। ಎ. ವಿ. ಮಯ್ಯ.
೧೨	ಸತೀವೃಂದಾ (,,)	ಶ್ರೀ। ಕೆ. ಸುಭಾಷಚಂದ್ರ ಶೆಣೈ.
೧೩	ಗೌತಮನ ಗೃಹತ್ಯಾಗ, ಸಿದ್ಧಾರ್ಥನ ಕಾರುಣ್ಯ	ಶ್ರೀ। ಎಲ್. ಎಸ್. ನಾಯಕ.
೧೪	ಪುನರುಜ್ಜೀವನ (ಸಾಮಾಜಿಕ)	ಶ್ರೀ। ಗೋವಿಂದ ಭಟ್ಟ.
೧೫	ಸ್ವಾತಂತ್ರ್ಯ (,,)	ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೧೬	ಭಕ್ತಕುಚೇಲ (ಪೌರಾಣಿಕ)	ಶ್ರೀ। ಅಂಬಾತನಯ.
೧೭	ಮದ್ವೆ ಅವಾಂತರ (ಪ್ರಹಸನ)	ಅಷ್ಟಾವಕ್ರ.
೧೮	ಗ್ರಾಮಸ್ವಾತಂತ್ರ್ಯ ,,	ಶ್ರೀ। ಎ. ವಿ. ಮಯ್ಯ.
೧೯	ಭಕ್ತ ಧ್ರುವ (ಪೌರಾಣಿಕ)	ಶ್ರೀ। ಸುಬ್ರಾಯ.
೨೦	ಬೇಡನ ಮಗಳು ,,	ಶ್ರೀ। ವೆಂಕಟರಾಜ ಪುಣಿಂಚತ್ತಾಯ.
೨೧	ಪುರಂದರದಾಸರು (ಐತಿಹಾಸಿಕ)	ಬಿ. ಪದ್ಮನಾಭ ಸೋಮಯಾಜಿ.
೨೨	ವೀರಾಗ್ರಣಿ ಕರ್ಣ (ಪೌರಾಣಿಕ)	ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೨೩	ಕುಶ-ಲವ ,,	ಶ್ರೀ। ಬಿ. ಈಶ್ವರಯ್ಯ.
೨೪	ಅಕ್ಷಯಪಾತ್ರೆ (ಸಾಮಾಜಿಕ)	ಶ್ರೀ। ಟಿ. ಚಂದ್ರರಾಜ ಸೆಟ್ಟಿ
೨೫	ವೈರಾಗ್ಯಸಿಧಿ (ತರಂಗರೂಪಕ)	ಶ್ರೀ। ಕೆ. ಎಸ್. ಶರ್ಮ, ವಿದ್ವಾನ್.
೨೬	ಭರತನ ಬಂಧುಪ್ರೇಮ(ಪೌರಾಣಿಕ)	ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೨೭.	ಮಹಾತ್ಮಾ ಉದಂಕ	ಶ್ರೀ। ಮಣಿಲ 'ಶಿವಶಂಕರ', ಪುಣಚಾ
೨೮.	ಭಕ್ತ ಪ್ರಹ್ಲಾದ (ಪೌರಾಣಿಕ)	ಶ್ರೀ। ಎ. ವಿ. ಮಯ್ಯ.
೨೯.	ಅಭಿಮನ್ಯು ,,	ಶ್ರೀ। ಬಿ. ಈಶ್ವರಯ್ಯ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು.

ಮೊದಲ ಮಾತು.

ಒಂದು ಶತಮಾನದ ಹಿಂದೆ ಭಾರತದಲ್ಲಿ, ರಾಷ್ಟ್ರದ ಚರಿತ್ರವನ್ನೇ ಬದಲಾಯಿಸುವ ಧೀಶಕ್ತಿಯ ಮಹಾನ್ ಪುರುಷನೊಬ್ಬನು ಜನಿಸಿ, ಜನತೆಯ ಧಾರ್ಮಿಕ-ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ನವಜೀವನವನ್ನು ತುಂಬಿಸಿಕೊಟ್ಟು ನಡೆದನು. ಪರತಂತ್ರದಲ್ಲಿ ನಿರ್ಜೀವವಾಗಿದ್ದ ಜನತೆಗೆ "ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು" ಎಂದು ಪ್ರಥಮ ರಾಜಕೀಯ ಮಂತ್ರವನ್ನು ಕಲಿಸಿಕೊಟ್ಟು, ಪ್ರಬಲ ಬ್ರಿಟಿಷ್ ಶಕ್ತಿಗೆದುರಾಗಿ ಜನರನ್ನು ರೊಚ್ಚಿಗೆಬ್ಬಿಸಿದ ಮಹಾತ್ಮನವನು—ಲೋಕಮಾನ್ಯ ಬಾಲಗಂಗಾಧರ ತಿಲಕ.

ಹತ್ತೊಂಭತ್ತನೇ ಶತಮಾನದ ಅಂತ್ಯದಲ್ಲೂ ಇಪ್ಪತ್ತನೇ ಶತಮಾನದ ಆದಿಯ ಭಾಗದಲ್ಲೂ ತಿಲಕರು, ಭಾರತದ ಜನತೆಯ ನೆಚ್ಚಿನ ನಾಯಕರಾಗಿದ್ದವರು. ಅವರು ಏನನ್ನು ಆ ಕಾಲದಲ್ಲಿ ಬೋಧಿಸಿದ್ದರೋ ಅಥವಾ ನಮ್ಮ ರಾಜಕೀಯ ಹೋರಾಟದಲ್ಲಿ ಯಾವ ಕಾರ್ಯವಿಧಾನವು ಅನುಸರಿಸಲ್ಪಡಬೇಕೆಂದು ವಿವರಿಸಿದ್ದರೋ—ಅದನ್ನು ಆ ಕಾಲದಲ್ಲಿ ಪ್ರತಿಭಟಿಸಿದ ಅಥವಾ ಎದುರಾಡಿದ ನಾಯಕರು ಇದ್ದರೂ, ಮುಂದೆ ಗಾಂಧಿಜಿಯವರು ಆ ಕಾರ್ಯಕ್ರಮವನ್ನೇ ತುಸು ಬದಲಾವಣೆಗಳಿಂದ ಕಾರ್ಯರೂಪಕ್ಕೆ ಹಚ್ಚಿದರು ತಿಲಕರು ತಮ್ಮ ಕ್ರಾಂತಿಪರ ಚಳವಳವನ್ನು ಹೂಡಿ ಮುನ್ನಡೆವಾಗ—ಜನತೆಯು ಪೂರ್ಣವಾಗಿ ನಿದ್ದೆಯ ಮಬ್ಬಿನಲ್ಲಿತ್ತು; ಆತ್ಮವಿಶ್ವಾಸವನ್ನು ಕಳಕೊಂಡಿತ್ತು; ತೀರ ನಿಸ್ಸಹಾಯಕವಾಗಿತ್ತು; ಆಳುವವರು ಜಗತ್ತಿನ ಪ್ರಥಮ ಶ್ರೇಣಿಯ ಶಕ್ತಿಯಾಗಿದ್ದರು. ತಿಲಕರು, ಮುಂದಿನ ನಾಯಕರಿಗೆ ಸುಲಭವಾಗುವಂತೆ ಹೋರಾಟದ ಕ್ಷೇತ್ರವನ್ನು ಹಸನುಗೊಳಿಸಿಕೊಟ್ಟರು.

ವಿದ್ವಾಂಸ-ಯೋಧ-ಸಮಾಜ ಸುಧಾರಕ-ಕೇವಲ ಜನತೆಗಾಗಿಯೇ ತನ್ನ ಜೀವನ ಎಂಬ ದೀಕ್ಷೆಯಿಂದ ಮುಂದರಿವ ಧುರೀಣ-ಇದೆಲ್ಲವೂ ತಿಲಕರಲ್ಲಿ ಪರಿಪೂರ್ಣವಾಗಿ ಮೂರ್ತೀಭವಿಸಿವೆ. ಅವರು, ಅದ್ವಿತೀಯ ರಚನಾ ಶಕ್ತಿಯುವರು. ನಿಸ್ಸಹಾಯಶೂರರು. ಪರಕೀಯರನ್ನು ಕಾದಾಡುವಾಗ ಸ್ವಕೀಯರಿಂದಲೂ ಕೆಲವೊಮ್ಮೆ ವಿರೋಧವನ್ನೆದುರಿಸಬೇಕಾಗಿ ಬಂದ—ಆದರೆ ಚಿಚ್ಛಕ್ತಿ ಕದಲದೆ ಮುಂದರಿದ—ಶೂರರು, ಸ್ಥೈರ್ಯವಂತರು. ತಿಲಕರ ಜೀವನವು ನವಚೇತನ ಪಡೆದ ಭಾರತದ ಜೀವನವಾಗಿದೆ. ಅವರಲ್ಲಿ ಭಾರತದ ಧಾರ್ಮಿಕ ಆತ್ಮವು ರೂಪವೆತ್ತಿದೆ; ರಾಜಕೀಯ ಚೇತನವು ಚಿಗುರೊಡೆದು ಬೆಳೆದಿದೆ.

ಈ ಮಹಾಪುರುಷನನ್ನು ಮಹದಭಿಮಾನದಿಂದ ನೆನೆಯದ ಭಾರತೀಯನಾರು! ಅವರ ಸಂಕ್ಷಿಪ್ತ ಜೀವನ ಚರಿತ್ರವಿದು, ಅವರ ವಿಸ್ತಾರವಾದ ಜೀವನ ಚರಿತ್ರವನ್ನು ಅಭ್ಯಸಿಸಲು ಪ್ರೇರಕವಾಗಲೆಂದೂ, ಪ್ರತಿಯೋರ್ವನಲ್ಲೂ ರಾಷ್ಟ್ರಾಭಿಮಾನವು ಜಾಗ್ರತವಾಗಿಯೇ ಇರುವಂತಾಗಲೆಂದೂ ಆಶಿಸಿ ಇದನ್ನು ಪ್ರಕಟಿಸಿರುವೆವು.

—ಕುಡ್ವ ವಾಸುದೇವ ಶೆಣೈ.

ಲೋಕಮಾನ್ಯ

ಬಾಲಗಂಗಾಧರ ತಿಲಕ

'ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು; ನಾನದನ್ನು ಸಾಧಿಸಿಯೇ ತೀರುವೆನು!'— ಈ ಸಿಂಹಗರ್ಜನೆಯನ್ನು ಯಾವ ಸ್ವಾತಂತ್ರ್ಯ ಪ್ರೇಮಿಯು ತಾನೇ ಮರೆಯಲಾಪನು? ಈ ಗರ್ಜನೆ ಗೈದವನೇ ಮಹಾರಾಷ್ಟ್ರದ ಕೇಸರಿ, ಆಂಗ್ಲಸಾಮ್ರಾಜ್ಯ ವೃಕ್ಷಕ್ಕೆ ಕುಠಾರಪ್ರಾಯನಾಗಿದ್ದ ನರಕೇಸರಿ, ಭರತವರ್ಷದ ಭಾಗ್ಯರತ್ನ ಬಾಲಗಂಗಾಧರತಿಲಕ. ೧೯೫೬ರ ಜುಲೈ ೨೩ರಂದು ಅಖಿಲ ಭರತಖಂಡವೇ ಲೋಕಮಾನ್ಯರ ಪುಣ್ಯ ವರ್ಧಂತಿಯ ಶತಾಬ್ದಿಯನ್ನು ವಿಜೃಂಭಣೆಯಿಂದ ಆಚರಿಸಿ, ತನ್ಮೂಲಕ ಆ ಸ್ವಾತಂತ್ರ್ಯಮೂರ್ತಿಗೆ ತನ್ನ ಹಾರ್ದಿಕ ವಂದನೆಗಳನ್ನು ಸಮರ್ಪಿಸಿದೆ. ಲೋಕಮಾನ್ಯ ತಿಲಕರದು ಮಹಾನ್ ವ್ಯಕ್ತಿತ್ವ. ಗರ್ವದ ಗಾಳಿಯೋ ಸೋಂಕಲಿಲ್ಲವೋ ಎಂಬಂತಿರುವ ನಿಗರ್ವಿಗುಣ ಅವರದು. ಆದರೆ, ಎಷ್ಟು ನಿಗರ್ವಿಯೋ ಅಷ್ಟೇ ಸ್ವಾಭಿಮಾನಿ, ಸ್ವದೇಶಾಭಿಮಾನಿ. ಒಂದು ಕಾರ್ಯದಲ್ಲಿ ಪ್ರವೃತ್ತರಾದರೆಂದರೆ, ಧೈರ್ಯ ಸ್ಥೈರ್ಯಗಳಿಂದ ಎಂತಹ ಎಡರುತೊಡರುಗಳನ್ನಾದರೂ ಎದುರಿಸುವ ಧೀರ ಪ್ರಕೃತಿ- "ಆಲಸ್ಯ"ವೆಂಬ ಶಬ್ದಕ್ಕೆ ಅವರು ಬದ್ಧವಿರೋಧಿ. ಅವರು ದುಡಿಯದ ಕ್ಷೇತ್ರವಿಲ್ಲ, ಮಾಡದ ಕಾರ್ಯವಿಲ್ಲ. ರಾಜಕೀಯ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲೂ, ವಿದ್ಯಾಸಂಬಂಧವಾದ ಹಾಗೂ ಪತ್ರಿಕೋದ್ಯಮದ ಮತ್ತು ಐತಿಹಾಸಿಕ ರಂಗಗಳಲ್ಲೂ ಅವರು ವಹಿಸಿದ ಪಾತ್ರ ಅಮೋಘವಾದುದು. ಸ್ವರಾಜ್ಯದ ಮೂಲಮಂತ್ರವನ್ನು ಭಾರತೀಯ ಜನತೆಗುಪದೇಶಿಸಿ, ಅವರು ರಾಷ್ಟ್ರದ ಬಂಧವಿಮೋಚನಾ ಕಾರ್ಯಸಾಧನೆಗೆ ಅಣಿಯಾಗುವಂತೆ ಅವರನ್ನು ಹುರಿದುಂಬಿಸಿ ರಾಷ್ಟ್ರಸ್ವಾತಂತ್ರ್ಯಕ್ಕೆ ಕಾರಣ ಪುರುಷರಾದ ಧನ್ಯವ್ಯಕ್ತಿ ಲೋಕಮಾನ್ಯರು. ಅವರ ಅಸಾಮಾನ್ಯ ವ್ಯಕ್ತಿತ್ವವೇ ಅವರ ಕಾಲಾನಂತರ ಸ್ವಾತಂತ್ರ್ಯ ರಣಾಂಗಣದಲ್ಲಿ ಧೀರಯೋಧರಾಗಿ ಕಾದಾಡುವಂತೆ ಭಾರತೀಯ ಜನತೆಗೆ ಸ್ಫೂರ್ತಿಯನ್ನಿತ್ತುದೆಂದರೆ ಅತ್ಯುಕ್ತಿಯೆನಿಸಲಾರದು.

ಬಾಲಗಂಗಾಧರ ತಿಲಕರ ಜನ್ಮ ೧೮೫೬ರ ಜುಲಾಯಿ ೨೩ರಂದು ರತ್ನಾಗಿರಿಯಲ್ಲಾಯಿತು. ತಂದೆ ಗಂಗಾಧರ ತಿಲಕರು ಉಪಾಧ್ಯಾಯರಾಗಿದ್ದರು. ಸಂಸ್ಕೃತ, ಗಣಿತ, ವ್ಯಾಕರಣಗಳಲ್ಲಿ ಅವರು ವಿದ್ವಾಂಸರು. ಅನುವಂಶಿಕವಾಗಿ ಬಂದ ಈ ಅಸಾಮಾನ್ಯ ವಿದ್ವತ್ತು ಬಾಲಗಂಗಾಧರ ತಿಲಕರಲ್ಲಿಯೂ ನೆಲೆಯೂರಿತ್ತು. 'ಬೆಳೆಯು ಗುಣ ಮೊಳಕೆಯಲ್ಲಿ ಕಂಡುಬರುತ್ತದೆ'ಂಬ ನಾಣ್ಣುಡಿಯಂತೆ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಕರ್ಣಧಾರನಾಗುವ, ಭಾರತದ ಭಾಗ್ಯವಿಧಾತನಾಗುವ ಸೂಚನೆ ತಿಲಕರ ಬಾಲ್ಯದಲ್ಲಿ ಪೂರ್ವಭಾವಿಯಾಗಿ ಕಂಡುಬಂದಿತ್ತು. ಬಾಲ್ಯದಿಂದಲೇ ಚುರುಕು ಪ್ರಕೃತಿಯವರೂ, ಸ್ವಾಭಿಮಾನಿಯೂ ಆಗಿದ್ದರು. ಅಲಸಿಗಳನ್ನು ಕಂಡರೆ ಎಲ್ಲಿಲ್ಲದ ಮುನಿಸು ಅವರಿಗೆ! ಅವರ ಸ್ವಾಭಿಮಾನದ ನಿದರ್ಶನವಾಗಿ ನಡೆದ ಘಟನೆ ಇದು:—

ಪ್ರಾಥಮಿಕ ವಿದ್ಯಾಭ್ಯಾಸವನ್ನು ನಡೆಸುತ್ತಿದ್ದಾಗ ಒಮ್ಮೆ ಉಪಾಧ್ಯಾಯರು ತರಗತಿಗೆ ಬರುವಾಗ ತಿಲಕರ ಓರಗೆಯ ವಿದ್ಯಾರ್ಥಿಗಳು ಕಡಲೆ ತಿಂದು ಸಿಪ್ಪೆಯನ್ನೆಲ್ಲ ತರಗತಿಯಲ್ಲೆಲ್ಲ ಹರಡಿದ್ದರು. ಉಪಾಧ್ಯಾಯರು ಬಂದು ಇದನ್ನು ನೋಡಿ ಸಿಟ್ಟುಗೊಂಡು ಅವುಗಳನ್ನೆಲ್ಲ ಹೊರಹಾಕಬೇಕೆಂದು ಅಪ್ಪಣೆ ವಿಧಿಸಿದರು. ತಿಲಕರನ್ನುಳಿದು ಉಳಿದೆಲ್ಲವರು ಉಪಾಧ್ಯಾಯರ ಆಜ್ಞೆಯನ್ನು ಪಾಲಿಸಿದರು. ತಿಲಕರಿಗೂ ಆ ಕೆಲಸ ಮಾಡುವಂತೆ ಅಧ್ಯಾಪಕರು ಅಣತಿಯಿತ್ತಾಗ, ತಾನು ಆ ಕೆಲಸ ಮಾಡಲಿಲ್ಲವಾದುದರಿಂದ ಸಿಪ್ಪೆಗಳನ್ನು ಹೊರಹಾಕಲಾರೆನೆಂದು ಸ್ಪಷ್ಟವಾಗಿ ನುಡಿದುಬಿಟ್ಟರು. ಇದರಿಂದ ಕನಲಿದ ಅಧ್ಯಾಪಕರು ತರಗತಿಯ ಹೊರಗೆ ನಿಲ್ಲಬೇಕೆಂದು ಆಜ್ಞಾಪಿಸಿದರು. ಕೂಡಲೇ ತನ್ನ ಪುಸ್ತಕ-ಚೀಲಗಳೆಲ್ಲವನ್ನು ಹಿಡಿದುಕೊಂಡು ತಿಲಕರು ಮನೆಗೆ ನಡೆದೇಬಿಟ್ಟರು. ಸಂಜೆ ಉಪಾಧ್ಯಾಯರು ತಿಲಕರ ತಂದೆಯೊಡನೆ ಈ ನಡೆದ ಸಂಗತಿಯನ್ನು ವಿವರಿಸಿದಾಗ ಅವರು, ತನ್ನ ಮಗನಿಗೆ ಅಂಗಡಿಯಿಂದ ತಿಂಡಿ ಕೊಂಡುಕೊಂಡು ತಿನ್ನುವ ಅಭ್ಯಾಸವೇ ಇಲ್ಲವೆಂದು ಹೇಳಿದರು. ಅಧ್ಯಾಪಕರಿಗೆ ತನ್ನ ತಪ್ಪಿನ ಮನವರಿಕೆಯಾಯಿತು.

ಪ್ರೌಢ ವಿದ್ಯಾಭ್ಯಾಸಕ್ಕಾಗಿ ತಿಲಕರನ್ನು ಪುಣೆಯ ಸಿಟಿ ಹೈಸ್ಕೂಲಿಗೆ ಸೇರಿಸಲಾಯಿತು. ಶಾಲೆಯಲ್ಲೂ ತಿಲಕರು ತನ್ನ ಪ್ರತಿಭೆಯನ್ನು ಬೀರಿದರ

ಲಿಲ್ಲ. ಪ್ರತಿಯೊಂದು ವಿಷಯದಲ್ಲೂ ಪ್ರಾವೀಣ್ಯವನ್ನು ಪಡೆದ ಅವರು ೧೮೭೨ರಲ್ಲಿ ಮೆಟ್ರಿಕ್ ತೇರ್ಗಡೆಹೊಂದಿದರು. ಮುಂಬೈ ಎಲ್ಫಿನ್‌ಸ್ಟನ್ ಕಾಲೇಜನ್ನು ಸೇರಿ ೧೮೭೬ರಲ್ಲಿ ಪ್ರಥಮ ಶ್ರೇಣಿಯಲ್ಲಿ ಬಿ. ಎ. ಉತ್ತೀರ್ಣರಾದರು. ಆ ಮೇಲೆ ೧೮೭೯ರಲ್ಲಿ ಎಲ್. ಎಲ್. ಬಿ. ಪದವಿಯೂ ಅವರಿಗೆ ದೊರೆಯಿತು. ವಿದ್ಯಾರ್ಥಿ ಜೀವನದಲ್ಲಿ ತಿಲಕರಿಗೆ ಪ್ರಸಿದ್ಧ ಸಮಾಜಸುಧಾರಕರಾಗಿದ್ದ ಆಗರಕರರ ಮೈತ್ರಿಯುಂಟಾಯಿತು. ಪದವಿಯನ್ನು ದೊರಕಿಸಿಕೊಂಡ ಮೇಲೆ, ಸರಕಾರದ ಸೇವೆ ಮಾಡೆನೆಂದು ತಿಲಕರು ಪ್ರತಿಜ್ಞೆಗೈದರು. ಇದರಿಂದ ಭಾರತದ ತರುಣ ವೃಂದವೇ ಜಾಗೃತಗೊಂಡು ಸ್ಫೂರ್ತಿಯುತವಾಯಿತು.

ಮೊದಲು ತಿಲಕರು ವಿದ್ಯಾರಂಗದಲ್ಲಿ ಕಾಲಿಟ್ಟರು. ಸರಕಾರದ ಸಹಕಾರವಿಲ್ಲದೇ ಪುಣೆಯಲ್ಲಿ 'ನ್ಯೂ ಇಂಗ್ಲಿಷ್ ಸ್ಕೂಲ್' ಎಂಬ ವಿದ್ಯಾಲಯವನ್ನು ಸ್ಥಾಪಿಸಿ, ಅದರಲ್ಲಿ ಉಪಾಧ್ಯಾಯರಾಗಿ ದುಡಿದರು. ಈ ವಿದ್ಯಾಸಂಸ್ಥೆಯು ಶುಕ್ಲಪಕ್ಷದ ಚಂದ್ರನೋಪಾದಿಯಲ್ಲಿ ದಿನೇ ದಿನೇ ವೃದ್ಧಿಗೊಳ್ಳಲಾರಂಭಿಸಿತು. ಹತ್ತೊಂಭತ್ತು ಮಂದಿ ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ವಿದ್ಯಾಲಯದಲ್ಲಿ ೧೮೮೮ರ ಕಾಲಕ್ಕೆ ಒಂದು ಸಾವಿರ ಮಂದಿ ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡಹತ್ತಿದರು! ತಿಲಕರು ವಿದ್ಯಾರ್ಥಿಗಳ ಮೇಲೆ ತನ್ನ ಪ್ರಭಾವೀ ವರ್ಚಸ್ಸನ್ನು ಬೀರಿದರು. ತತ್ಪರಿಣಾಮವಾಗಿ ಸರಕಾರಿ ಪರೀಕ್ಷೆಗಳಲ್ಲಿ ತೇರ್ಗಡೆಹೊಂದುವ ವಿದ್ಯಾರ್ಥಿಗಳ ಸಂಖ್ಯೆ ದಿನೇ ದಿನೇ ಏರತೊಡಗಿತು. ತಿಲಕರ ಮುಂದಾಳ್ತನದಲ್ಲಿ 'ಡೆಕ್ಕನ್ ಎಜ್ಯುಕೇಶನ್ ಸೊಸೈಟಿ'ಯು ಸ್ಥಾಪಿತವಾಗಿ ತನ್ಮೂಲಕ ಫರ್ಗುಸನ್ ಕಾಲೇಜನ್ನು ಸ್ಥಾಪಿಸುವ ಮಹಾಸಾಹಸ ಕಾರ್ಯಕ್ಕೆ ಮೊದಲಾಯಿತು. ಆ ಕಾಲೇಜಿನಲ್ಲಿ ತಿಲಕರು ತಮ್ಮ ಪ್ರೀತಿಯ ವಿಷಯಗಳಾದ ಗಣಿತ ಹಾಗೂ ಸಂಸ್ಕೃತಗಳನ್ನು ಕಲಿಸಲಾರಂಭಿಸಿದರು.

ಮಹಾರಾಷ್ಟ್ರದಲ್ಲಿ ಈ ಮಹಾಪುರುಷನ ಅವತಾರದಿಂದ ಜನಜಾಗ್ರತಿಯುಂಟಾಗತೊಡಗಿತು. ಲೋಕಮಾನ್ಯರು ಪತ್ರಿಕೋದ್ಯಮ ಕ್ಷೇತ್ರಕ್ಕಿಳಿದರು. 'ಕೇಸರಿ' ಎಂಬ ಮರಾಠಿ ಪತ್ರಿಕೆಯನ್ನೂ, 'ಮರಾಠಾ' ಎಂಬ ಇಂಗ್ಲಿಷ್ ಪತ್ರಿಕೆಯನ್ನೂ ಪ್ರಕಟಿಸಲಾರಂಭಿಸಿ, ಜನರ ಸೇವೆಗಾರಂಭಿಸಿದರು. ವಿದೇಶೀ ಸರಕಾರದ ದಬ್ಬಾಳಿಕೆಯನ್ನೂ, ಕುರುಡು ಆಡಳಿತೆಯನ್ನೂ

ಬಯಲಿಗೆಳೆಯುವುದೂ, ಸರಕಾರವೊಡ್ಡಿದ ಕುತಂತ್ರಜಾಲದಲ್ಲಿ ಸಿಕ್ಕಬಾರದೆಂಬುದಾಗಿ ಜನತೆಯನ್ನೆಚ್ಚರಿಸುವುದೂ ಈ ವಾರ್ತಾಪತ್ರಗಳ ಮುಖ್ಯೋದ್ದೇಶವಾಗಿತ್ತು. ವಿದ್ವತ್ಪೂರ್ಣವಾದ ಅವರ ರಾಜಕೀಯ ಲೇಖನಗಳು ಭಾರತೀಯರಲ್ಲಿ ಸ್ವಾತಂತ್ರ್ಯದಾಹವನ್ನುಂಟುಮಾಡಲಾರಂಭಿಸಿದುವು. ಇದರಿಂದ ಜನತೆಯಲ್ಲಿ ಅಡಗಿದ್ದ ಸುಪ್ತ ರಾಷ್ಟ್ರೀಯಭಾವನೆಗಳು ಜಾಗೃತಗೊಂಡು, ನವಚೈತನ್ಯವನ್ನುಂಟುಮಾಡಿದುವು. ಅದೇ ಸಮಯದಲ್ಲಿ ಸರಕಾರದವರು ಕೊಲ್ಹಾಪುರದ ಮಹಾರಾಜರನ್ನು ದುರುದ್ದೇಶಗಳಿಗಾಗಿ ಉಪಯೋಗಿಸುವುದನ್ನು ವಿರೋಧಿಸಿ, ಪತ್ರಿಕೆಗಳ ಮೂಲಕ ಮಂತ್ರಿಗಳ ಮೇಲೆ ಗದೆ ಎತ್ತಿದರು! ಇದರಿಂದ ಸಂಸ್ಥಾನದ ಮುಖ್ಯಸಚಿವರು ತಿಲಕರ ಮೇಲೆ ಮಾನಹಾನಿ ವ್ಯಾಜ್ಯ ಹೂಡಿದರು. ೧೮೮೦ರಲ್ಲಿ ಆಗರಕರರೊಂದಿಗೆ ತಿಲಕರ ಬಂಧನವಾಯಿತು. ಇದರಿಂದ ಲೋಕಮಾನ್ಯರ ಹೆಸರು ಮಹಾರಾಷ್ಟ್ರದಲ್ಲೇ ಏಕೆ, ಅಖಿಲಭಾರತದಲ್ಲೇ ಕೇಳಬರಲಾರಂಭಿಸಿತು.

ಬಂಧ ವಿಮೋಚನೆಯಾದ ನಂತರ ಹಿಂದಿನಂತೆಯೇ ಹೋರಾಟಕ್ಕೆ ಮೊದಲಾಯಿತು. ಕೇಸರಿ ಪತ್ರಿಕೆಯ ಮೂಲಕ ರತ್ನಾಗಿರಿಯ ಕಮಿಶನರನ ವಿರುದ್ಧ ಆಂದೋಲನವೆಬ್ಬಿಸಿದರು. ಕ್ರಾಫರ್ಡ್ ಎಂಬವನು ರತ್ನಾಗಿರಿಯ ಕಮಿಶನರನಾಗಿದ್ದು, ತನ್ನ ಕೈಕೆಳಗಿನ ಅಧಿಕಾರಿಗಳ ಮೂಲಕ ಲಂಚತಿನ್ನಹತ್ತಿದನು. ದಿನೇ ದಿನೇ ಅವನ ಈ ದುರಾಚಾರ ಹೆಚ್ಚುತ್ತ ಹೋಯಿತು. ತಿಲಕರಿಗಿದು ಅಸಹನೀಯವಾಗಿ ಸಾರ್ವಜನಿಕ ಸಭೆಗಳ ಮೂಲಕವೂ, ಕೇಸರಿಯ ಮುಖಾಂತರವೂ ಕ್ರಾಫರ್ಡನ ವಿರುದ್ಧ ಚಳವಳಿಯನ್ನೇ ಎಬ್ಬಿಸಿದರು. ಕ್ರಾಫರ್ಡನು ನಡೆಸಿದ ಕುಟಿಲಕಾರಸ್ಥಾನಗಳು ಬಯಲಿಗೆಳೆಯಲ್ಪಟ್ಟುವು. ಈ ಪ್ರಕರಣದ ವಿಚಾರಣೆಗಾಗಿ ಸರಕಾರದಿಂದ ಒಂದು ಕಮಿಶನ್ ನೇಮಿತವಾಯಿತು. ನ್ಯಾಯ ತೀರ್ಮಾನಕ್ಕಾಗಿ ನೇಮಿತವಾದ ಕಮಿಶನು ಅನ್ಯಾಯದ ತೀರ್ಪನ್ನಿತ್ತು, ಬೇಲಿ ಹೊಲ ಮೆದ್ದ ಉದಾಹರಣೆಯನ್ನು ನೆನಪಿಗೆ ತಂದಿತು. ಇಲ್ಲಿ ಜಾತೀಯತಾ ಭಾವನೆಯು ಅಂಕುರಿತವಾಯಿತೆನ್ನದೇ ನಿರ್ವಾಹವಿಲ್ಲ. ನಿಜವಾದ ಅಪರಾಧಿ ಕ್ರಾಫರ್ಡ್ ಎಂದು ಪ್ರಕಟವಾದಲ್ಲಿ ತಮ್ಮ ಜನಾಂಗದ 'ಧವಳಕೀರ್ತಿಗೆ' ಮಸಿ ಬಳಿದಂತಾಗುವುದೆಂದು ಬೆದರಿ, ಕಮಿಶನರನ ಕೈಕೆಳಗಿನ ಹಿಂದೀ ಅಧಿಕಾರಿಗಳನ್ನು ತಪ್ಪಿತಸ್ಥರೆಂದು ತೀರ್ಪನ್ನಿತ್ತಿತ್ತು ಕಮಿಶನ್. ಕೂಡಲೇ ಉರಿಯುವ ಅಗ್ನಿಗೆ

ಆಜ್ಯವನ್ನೆರೆದಂತೆ ತಿಲಕರ ಆಂದೋಲನ ಭರದಿಂದ ಸಾಗಿತು. ಲೋಕಮಾನ್ಯರು, ಹಿಂದೆಯೇ ಹೇಳಿದಂತೆ ಪತ್ರಿಕೆಗಳ ಹಾಗೂ ಸಾರ್ವಜನಿಕ ಸಭೆಗಳ ಮುಖಾಂತರ ಚಳವಳಿಯನ್ನೇ ಹೂಡಿ, ಸರಕಾರದ ನಗ್ನಚಿತ್ರವನ್ನು ಬಯಲಿಗೆಳೆದರು. ಈ ಪ್ರಕರಣ ಪಾರ್ಲಿಮೆಂಟಿಗೂ ಹೋಯಿತು! ತಿಲಕರು ಇದರಲ್ಲಿ ವಿಜಯಿಯಾಗದಿದ್ದರೂ, ಆಂಗ್ಲರ ಕುಟಿಲಕಾರಸ್ಥಾನಗಳೆಲ್ಲ ಜನಜನಿತವಾದುವು. ಇದನ್ನು ಕಂಡ ಸರಕಾರ ಒಳಗೊಳಗೇ ಕುದಿಯತೊಡಗಿತು. ಆದರೆ, ತಾನು ಮಾಡಿದ್ದ ಅನ್ಯಾಯ ಜನರಿಗೆ ತಿಳಿದಿದ್ದುದರಿಂದ ಸರಕಾರಕ್ಕೆ ಏನು ಮಾಡಲೂ ಧೈರ್ಯಬರಲಿಲ್ಲ!

ತಿಲಕರು ಧಾರ್ಮಿಕ ಮುಂದಾಳುಗಳು, ಸನಾತನಧರ್ಮದ ಶ್ರೇಷ್ಠ ಪ್ರತಿಪಾದಕರು; ಆದರೆ ಪರಧರ್ಮ ಸಹಿಷ್ಣು. ಮಹಾರಾಷ್ಟ್ರೀಯಲ್ಲಿ ಧಾರ್ಮಿಕ ಜಾಗೃತಿಯನ್ನುಂಟುಮಾಡಲು ಗಣಪತಿ ಉತ್ಸವವೂ, ರಾಜಕೀಯ ಜಾಗೃತಿಯುಂಟುಮಾಡಲೋಸುಗ ಶಿವಾಜಿಯ ಉತ್ಸವವೂ ತಿಲಕರಿಂದ ಆಚರಿಸಲ್ಪಡಲು ಮೊದಲಾಯಿತು. ಇದರಿಂದಾಗಿ ರಾಷ್ಟ್ರದಲ್ಲಿ ಧಾರ್ಮಿಕ, ರಾಜಕೀಯದೊಡನೆ ಸಾಂಸ್ಕೃತಿಕ ಜಾಗೃತಿಯೂ ಉಂಟಾಗತೊಡಗಿತು. ಭಾರತದ ಉಜ್ವಲವಾದ ಗತ ಸಂಸ್ಕೃತಿಯ ಕುರಿತು ಜನಾಂಗವು ಹೆಮ್ಮೆಪಟ್ಟಿತು. ಈ ಉತ್ಸವಗಳು ಎಷ್ಟು ಜನಪ್ರಿಯವಾದುವೆಂದರೆ, ಕೆಲವೆಡೆಗಳಲ್ಲಿ ಮಹಮ್ಮದೀಯರೂ ಇವುಗಳಲ್ಲಿ ಸಹಭಾಗಿಗಳಾದರು! ಜನತೆಯ ಉತ್ಸಾಹವನ್ನು ಕಂಡು ಕಿಡಿಗಾರತೊಡಗಿದ ಸರಕಾರವು ದಬ್ಬಾಳಿಕೆಗಾರಂಭಿಸಿತು.

೧೮೯೦ರಲ್ಲಿ ತಿಲಕರಿಗೂ ಫರ್ಗ್ಯುಸನ್ ಕಾಲೇಜಿನ ಕಾರ್ಯಕರ್ತರಿಗೂ ಭಿನ್ನಾಭಿಪ್ರಾಯಗಳುಂಟಾದುವು. ವಿದ್ಯಾಲಯವನ್ನು ನಡೆಸುವ ಕುರಿತು ಇಬ್ಬರಲ್ಲಿಯೂ ಮತಭೇದ ತಲೆದೋರಿ ತಿಲಕರು ವಿದ್ಯಾಲಯವನ್ನಗಲಿದರು. ಮುಂದೆ ಆಗರಕರರೊಡನೆ ಲೋಕಮಾನ್ಯರಿಗೆ ಭಿನ್ನಾಭಿಪ್ರಾಯವುಂಟಾಯಿತು. ತಿಲಕರು ರಾಜಕಾರಣಿಯಾದರೆ, ಆಗರಕರ್ ಸಮಾಜ ಸುಧಾರಕರು. ಇಬ್ಬರೂ ದೇಶಪ್ರೇಮಿಗಳು. ಆದರೆ ರಾಷ್ಟ್ರದ ಉನ್ನತಿಗೆ ಸಮಾಜ ಮೊದಲು ಸುಧಾರಿಸಬೇಕೋ, ಸ್ವಾತಂತ್ರ್ಯ ಮೊದಲು ದೊರಕಬೇಕೋ ಎಂಬ ವಿಷಯದಲ್ಲಿ ಇಬ್ಬರಲ್ಲಿ ಮತಭೇದವುಂಟಾಗಿ, ತಿಲಕರು ಸ್ವಾತಂತ್ರ್ಯದ ಬಗ್ಗೆ, ಆಗರಕರರು ಸಮಾಜ ಸುಧಾರಣೆಯ ಬಗ್ಗೆ ಪ್ರತಿಪಾದಿಸಿಕೊಂಡು

ಒಬ್ಬರನ್ನೊಬ್ಬರು ಅಗಲಿದರು. ಅಗಲಿದ ನಂತರ ತಿಲಕರು ತಾವು ನಡೆಯಿಸುತ್ತಿದ್ದ ವೃತ್ತಪತ್ರಗಳನ್ನು ನಡೆಸುವ ಜವಾಬ್ದಾರಿಯನ್ನು ಹೊರಲು ಸಿದ್ಧರಾಗಬೇಕಾಯಿತು, ಸಿದ್ಧರಾದರು. ಮರಾಠಾ ಪತ್ರದ ಪ್ರಕಟಣೆಗಾಗಿ ಏಳುಸಾವಿರ ರೂಪಾಯಿ ಸಾಲವಾಯಿತು. ಆದರೆ ತಿಲಕರು ಎದೆಗೆಡದೇ ನ್ಯಾಯಶಾಸ್ತ್ರದ(Law)ದ ತರಗತಿಯೊಂದನ್ನು ತೆರೆದರು. ಧನಲಕ್ಷ್ಮಿಯು ತಿಲಕರಿಗೊಲಿದಳೋ ಎಂಬಂತೆ ಧನದ ಸುರಿಮಳೆಗೆ ಮೊದಲಾಯಿತು. ಸ್ಫೂರ್ತಿಯುತವಾದ ಅವರ ರಾಜಕೀಯ ಲೇಖನಗಳನ್ನೋದಿ ಮೆಚ್ಚಿದ ಜನತೆಯು ಕೇಸರಿ ಪತ್ರಿಕೆಗೆ ಪ್ರೋತ್ಸಾಹ ನೀಡತೊಡಗಿತು. ಅದರಿಂದಾಗುವ ಲಾಭವು ಒಮ್ಮೆಲೇ ಮೂವತ್ತು ಸಾವಿರಕ್ಕೂ ಮಿಕ್ಕಿತು! ಇದಕ್ಕೆನ್ನಬೇಕು ದೈವಕೃಪೆಯೆಂದು, ವಿಧಿಯ ವಿಚಿತ್ರ ಆಟವೆಂದು! 'ಕೇಸರಿ'ಯೊಂದಿಗೆ ಈ ಮಹಾರಾಷ್ಟ್ರ ಕೇಸರಿಯೂ, ನಿದ್ದೆಯಲ್ಲಿದ್ದ ಜನತೆಯನ್ನು ಹೊಡೆದೆಬ್ಬಿಸಲಾರಂಭಿಸಿತು.

ರಾಜಕೀಯ ರಂಗದಲ್ಲಿ ತಿಲಕರ ಬರೆಹಗಳು ಬಿರುಗಾಳಿಯನ್ನೇ ಎಬ್ಬಿಸಿದುವು. ಆಗ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಭಾರತ ರಾಷ್ಟ್ರೀಯ ಕೊಂಗ್ರೆಸ್ ಸ್ಥಾಪಿತವಾಗಿತ್ತು. ಜನಸೇವಕರಾದ ತಿಲಕರು ಕೊಂಗ್ರೆಸ್ಸನ್ನು ಸೇರಿದರು. ಜನತೆ ತಿಲಕರ ಬೆಂಬಲಕ್ಕೆ ನಿಂತಿತು. ೧೮೯೫ರಲ್ಲಿ ಅವರು ಪ್ರಾಂತೀಯ ಕಾಯಿದೆಮಂಡಲದ ಸದಸ್ಯರಾಗಿ ಚುನಾಯಿತರಾದರು ಜನಾಭಿಪ್ರಾಯವನ್ನು ಸ್ಪಷ್ಟ ವಾಕ್ಯಗಳಲ್ಲಿ ನಿರ್ಭೀತಿಯಿಂದ ಮಂಡಲದ ಮುಂದಿಡುತ್ತಿದ್ದರು. ಸ್ವಭಾವತಃ ಅಸಾಮಾನ್ಯ ವಾಗ್ಮಿಗಳಾದ ತಿಲಕರ ನಿರ್ಭೀತ ವಾಕ್ಯಗಳ ವಾದಸರಣಿಯು ಸಕಲರನ್ನೂ ದಂಗುಬಡಿಸುತ್ತಿತ್ತು. ಸಾಮಾನ್ಯವಾಗಿ ಇದೇ ಸಮಯದಲ್ಲಿ ಮಹಾರಾಷ್ಟ್ರ ಹಾಗೂ ಕರ್ಣಾಟಕಗಳು ಕ್ಷಾಮಕ್ಕೆ ತುತ್ತಾದುವು. ತಿಲಕರು ಕ್ಷಾಮದ ಕರುಣಕಥೆಯನ್ನು ಪತ್ರಿಕೆಗಳಲ್ಲಿ ವಿವರಿಸಿ, ಸಂಗ್ರಹವಾದ ಕ್ಷಾಮನಿಧಿಗಳನ್ನು ಕ್ಷಾಮನಿವಾರಣೆಗಾಗಿ ಉಪಯೋಗಿಸಬೇಕೆಂದು ಸರಕಾರವನ್ನು ಆಗ್ರಹಪಡಿಸಿದರು. ಚಳವಳಿಯೂ ಪ್ರಾರಂಭವಾಯಿತು. ತಿಲಕರ ಪ್ರಭಾವಕ್ಕೆ ಸರಕಾರ ಮಣಿಯದಿರುವುದು ಅನಿವಾರ್ಯವಾಯಿತು. ಸರಕಾರದ ಸಹಕಾರದಿಂದ ಲೋಕಮಾನ್ಯರ ಮುತುವರ್ಜಿಯಿಂದ ಅಲ್ಲಲ್ಲಿ ನ್ಯಾಯಬೆಲೆಯ ಅಂಗಡಿಗಳೂ, ಛತ್ರ, ಕೆರೆಕಾಲುವೆಗಳೂ ನಿರ್ಮಿತವಾ

ದುವು. ಇದರಿಂದಾಗಿ 'ಲೋಕಮಾನ್ಯ'ರೆಂಬ ತಿಲಕರ ಬಿರುದು ಅವರಿಗೆ ಸಾರ್ಥಕವಾಯಿತು.

ಕ್ಷಾಮದ ಸಂಕಷ್ಟ ಕೊನೆಗೊಳ್ಳುವುದರಲ್ಲೇ ಜನತೆ ಇನ್ನೊಂದು ಹಾವಳಿಯನ್ನಿದಿರಿಸಬೇಕಾಯಿತು. ಸಂಸ್ಥಾನದಲ್ಲಿ ಪ್ಲೇಗ್ ರೋಗದ ಹಬ್ಬುವಿಕೆಯು ಪ್ರಾರಂಭವಾಯಿತು. ತಿಲಕರು ಜೀವದ ಹಂಗುದೊರೆದು ರೋಗಿಗಳ ಆರೈಕೆ ಮಾಡಹತ್ತಿದರು. ರೋಗಿಗಳಿಗಾಗಿ ಚಿಕಿತ್ಸಾಲಯುಗಳನ್ನು ತೆರೆಯುಲಾಯಿತು. ಈ ಸಮಯದಲ್ಲಿ ಸರಕಾರವು ನಿಂದ್ಯವಾದ ಕಾರ್ಯವೊಂದನ್ನು ಗೈದಿತು. ಅದೇನೆಂದರೆ—ರೋಗಿಗಳನ್ನು ಹೊರ ತೆಗೆದು, ಅವರ ವಾಸಸ್ಥಾನಗಳನ್ನು ಶುಚಿಗೊಳಿಸಲು ಸೈನಿಕರೂ, ಪೋಲೀಸರೂ ನೇಮಕಹೊಂದಿದರು. ಇದರಿಂದ ತುಂಬಾ ಅಕೃತ್ಯಗಳು ನಡೆದುವು. ಜನತೆ ರೊಚ್ಚಿಗೆದ್ದಿತು. ತಿಲಕರು ಪತ್ರಿಕೆಗಳ ಮೂಲಕ ಈ ದುಷ್ಕೃತ್ಯಗಳನ್ನು ಹೊರಗೆಡವಿದರು. ಸರಿ, ಸರಕಾರದ ವಕ್ರದೃಷ್ಟಿ ತಿಲಕರೆಡೆಗೆ ಹರಿಯಿತು. ಇದೇ ಸಮಯದಲ್ಲಿ ದೇಶಭಕ್ತರಾದ ಚಾಫೆಕರ ಬಂಧುಗಳು ಆಂಗ್ಲ ಅಧಿಕಾರಿಯೋರ್ವನ ಕೊಲೆಗೈದುಬಿಟ್ಟರು! ಶೋಧನೆ ಆರಂಭವಾಗಿ, ಚಾಫೆಕರ ಬಂಧುಗಳನ್ನು ಮರಣದಂಡನೆಗೆ ಗುರಿಮಾಡಲಾಯಿತು. ಅಲ್ಲದೇ ಕೊಲೆಯು ಒಳಸಂಚಿನಲ್ಲಿ ತಿಲಕರೂ ಭಾಗವಹಿಸಿದರೆಂದು ರಾಜದ್ರೋಹದ ಆಪಾದನೆ ಹೊರಿಸಿ ಒಂದೂವರೆ ವರ್ಷದ ಶಿಕ್ಷೆಗೆ ಅವರನ್ನು ಗುರಿಪಡಿಸಿತು ಸರಕಾರ. ಅಪೀಲುಮಾಡಿದರೂ ಜಯದೊರೆಯಲಿಲ್ಲ. ಸೆರೆಮನೆಯಲ್ಲಿ ತಿಲಕರ ಮನಸ್ಸು ಅಧ್ಯಾತ್ಮಿಕ ಜೀವನದೆಡೆಗೆ ಹರಿಯಿತು. 'The Arctic Home of the Vedas' ಎಂಬ ಪಾಂಡಿತ್ಯಪೂರ್ಣವಾದ ಅಮೋಘ ಗ್ರಂಥವೊಂದು ತಿಲಕರಿಂದ ಪ್ರಕಟಿತವಾಯಿತು. ಇದರಿಂದಾಗಿ ತಿಲಕರ ಪ್ರತಿಭೆ ವಿದೇಶಗಳಲ್ಲಿಯೂ ಹಬ್ಬಿತು. ಅವರ ಬರೆಹಗಳಿಗೆ ಮಾರುಳುಗೊಂಡ ವಿದೇಶೀ ವಿದ್ವಾಂಸರನೇಕರು ಅವರ ಬಿಡುಗಡೆಗಾಗಿ ಹೂಡಿದ ಚಳವಳಿಯಿಂದ ತಿಲಕರು ಶಿಕ್ಷಾವಧಿಯ ಆರು ತಿಂಗಳ ಮೊದಲೇ ಬಂಧವಿಮುಕ್ತರಾದರು. ತಿಲಕರ ಈ ವಿಜಯದುಂದುಭಿಯಿಂದ ಭಾರತಾಂಬೆ ಸಂತೋಷಭರಿತಳಾದಳು. ತಿಲಕರು ತನ್ನ ಅಸಾಮಾನ್ಯ ವರ್ಚಸ್ಸಿನಿಂದ ಜನತೆಯ ಅಂತಃಕರಣವನ್ನು ತನ್ನೆಡೆಗೆ ಸೆಳೆದುಕೊಂಡರು.

ಮಳೆನಿಂತರೂ ಹನಿ ನಿಲ್ಲಲಿಲ್ಲವೆಂಬಂತೆ. ಈ ಶಿಕ್ಷೆ ಮುಗಿದು ಬಂದಾಗ

ಲೋಕಮಾನ್ಯರು ಇನ್ನೊಂದು ಕಠಿಣ ಪ್ರಸಂಗವನ್ನೆದುರಿಸಬೇಕಾಯಿತು. ಸರದಾರ್ ಬಾಬಾಸಾಹೇಬ್ ಎಂಬವರು ತನಗೆ ಮರಣಕಾಲದಲ್ಲಿ ಸಂತತಿಯಿಲ್ಲದಿದ್ದುದರಿಂದ ತನ್ನ ಸೊತ್ತಿಗೆ ತಿಲಕರು ವಿಶ್ವಸ್ಥರಾಗಬೇಕೆಂದು ಆಗ್ರಹಪೂರ್ವಕವಾಗಿ ಅವರನ್ನು ಕೇಳಿಕೊಂಡರು. ಕೊನೆಗೆ ಲೋಕಮಾನ್ಯರು ಅದಕ್ಕೊಪ್ಪಲೇ ಬೇಕಾಯಿತು, ಒಪ್ಪಿಕೊಂಡರು. ಮರಣ ಶಾಸನದನ್ವಯ ಸರದಾರರ ಪತ್ನಿಯ ಇಷ್ಟದಂತೆ ದತ್ತಸ್ವೀಕಾರ ನಡೆಯಿತು. ಮುಂದೆ ಅವಳೇ, ತನ್ನ ಇಷ್ಟದಂತೆ ದತ್ತವು ನಡೆಯಲಿಲ್ಲವೆಂದು ತಿಲಕರ ವಿರುದ್ಧ ಖಟ್ಲೆ ಹೂಡಿದಳು. ತತ್ಪರಿಣಾಮವಾಗಿ ತಿಲಕರಿಗೆ ಹದಿನೆಂಟು ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿತು. ಆದರೆ, ಹೈಕೋರ್ಟಿನಲ್ಲಿ ತಿಲಕರು ನಿರಪರಾಧಿಗಳೆಂದು ತೀರ್ಮಾನ ದೊರೆಯಿತು. ಇದರಿಂದ ಸರಕಾರದ ಮುಖಕ್ಕೆ ಗ್ರಹಣ ಹಿಡಿಯಿತು! ಕಾರಣ ಸರಕಾರವೇ ಸುಳ್ಳು ಸಾಕ್ಷ್ಯಗಳನ್ನು ಸಂಗ್ರಹಿಸಿತ್ತು. ಈ ಖಟ್ಲೆಯಿಂದ ತಿಲಕರು ಭಾರತದಾದ್ಯಂತ ಪ್ರಸಿದ್ಧರಾದರು ರಾಜಕೀಯ ರಂಗದಲ್ಲಿ ಅಂಥ ಯೋಗ್ಯ ಮಾರ್ಗದರ್ಶನವಿಲ್ಲದೇ ಜನತೆ ಕಂಗೆಟ್ಟದ್ದರಿಂದ ಭಾರತದ ರಾಷ್ಟ್ರೀಯ ಚಳವಳಿಯಲ್ಲಿ ತಿಲಕರಿಗೆ ಅಗ್ರಗಾಮಿತ್ವ ದೊರೆಯಿತು.

೧೯೦೫ರ ಸುಮಾರಿನ ಕಾಲ. ರಾಜಪ್ರತಿನಿಧಿಯಾಗಿದ್ದ ಕರ್ಝನನು ಬಂಗಾಲವನ್ನು ದ್ವಿಭಾಗಿಸಿದನು. ವಂಗಭಂಗದಿಂದ ಬಂಗಾಲದಲ್ಲಿ ಮಾತ್ರವಲ್ಲ, ಅಖಿಲ ಭಾರತದಲ್ಲಿಯೇ ಜನರು ಜಾಗೃತರಾದರು. ಅವಿಭಕ್ತ ಕುಟುಂಬದಂತಿದ್ದ ತಮ್ಮನ್ನು ಬೇರ್ಪಡಿಸಲು ಸರಕಾರ ಗೈದ ಕುತಂತ್ರವಿದೆಂದು ಬಂಗಾಲಿಗಳು ರೊಚ್ಚಿಗೆದ್ದರು. ಅದರಲ್ಲಿಯೂ ಬಿಸಿರಕ್ತದ ತರುಣರು ಸರಕಾರದ ಮೇಲೆ ಸೇಡು ತೀರಿಸಿಕೊಳ್ಳಲು ಉತ್ಸುಕರಾಗಿದ್ದರು. ರಾಜಕೀಯದಲ್ಲಿ ಇಷ್ಟು ಮಂದಧೋರಣೆಯು ಫಲಕಾರಿಯಾಗದೆಂದು ಮನಗಂಡ ತಿಲಕರು ಉಗ್ರ ಕಾರ್ಯಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಿದರು. ೧೯೦೫ರ ಬನಾರಸ್ ಕೊಂಗ್ರೆಸ್ಸಿನ ಅಧಿವೇಶನದಲ್ಲಿ ವಂಗವಿಭಜನೆ ತೀವ್ರವಾಗಿ ಖಂಡಿಸಲ್ಪಟ್ಟಿತು. ಆದರೆ ಈ ಖಂಡನೆ ಫಲಕಾರಿಯಾಗಲಿಲ್ಲ. ಸರಕಾರ ಮಣಿಯಲಿಲ್ಲ. ತಿಲಕರು ವಂಗದ ಐಕ್ಯವನ್ನು ಗುರಿಯಾಗಿಟ್ಟುಕೊಂಡು ಉಗ್ರಗಾಮಿಗಳಾದ ರಾಷ್ಟ್ರೀಯತಾವಾದಿ (Nationalists)ಗಳ ಪಕ್ಷವನ್ನು ಸಂಘಟಿಸಿ, ಸರಕಾರವನ್ನು ಪ್ರತಿಭಟಿಸಲು ನಿರ್ಧಾರಮಾಡಿದರು. ೧೯೦೬ರಲ್ಲಿ ಜರಗಿದ ಕಲ್ಕತ್ತಾ ಕೊಂಗ್ರೆಸ್ ಅಧಿವೇಶನದಲ್ಲಿ 'ಸ್ವರಾಜ್ಯವೇ

ಕಾಂಗ್ರೆಸ್ಸಿನ ಗುರು' ಎಂದು ಅಧ್ಯಕ್ಷಪೀಠದಿಂದ ಭಾರತದ ಪೂಜ್ಯ ಪಿತಾಮಹ ದಾದಾಭಾಯಿ ನವರೋಜಿಯವರು ಗುಡುಗಿದರು. ಈ ಗುಡುಗಿನಿಂದ ಸರಕಾರವೆಚ್ಚರಗೊಂಡಿತು. ಸ್ವದೇಶೀ ಚಳವಳಿಯನ್ನಾರಂಭಿಸಲು ಲೋಕಮಾನ್ಯರು ರಾಷ್ಟ್ರಕ್ಕೆ ಉಪದೇಶಗೈದರು. ಪರದೇಶೀ ವಸ್ತುಗಳು ರಾಷ್ಟ್ರದ ಎಲ್ಲೆಡೆಗಳಲ್ಲೂ ಬಹಿಷ್ಕರಿಸಲ್ಪಡಬೇಕೆಂಬುದಾಗಿ ಜನತೆಯನ್ನು ಕೇಳಿಕೊಂಡು, ದೇಶದಲ್ಲಿ ಸ್ವದೇಶೀ ವಸ್ತುಗಳನ್ನು ತಯಾರಿಸಬೇಕೆಂದು ಸಾರಿದರು. ರಾಷ್ಟ್ರೀಯ ಶಿಕ್ಷಣವು ಸ್ವರಾಜ್ಯದ ಮೂಲವೆಂದು ಜನತೆಗೆ ತಿಳಿಸಿದರು. ಜನತೆ ತನುಮನಧನಪೂರ್ವಕವಾಗಿ ತಿಲಕರ ಕರೆಯನ್ನು ಮನ್ನಿಸಿತು. ೧೯೦೭ರ ಸೂರತ್ ಕಾಂಗ್ರೆಸ್ಸಿನಲ್ಲಿ ಮಂದಗಾಮಿಗಳಿಗೂ, ಉಗ್ರಗಾಮಿಗಳಿಗೂ ಘರ್ಷಣೆ ನಡೆದು ಆ ವರ್ಷದ ಅಧಿವೇಶನ ಮುರಿಯಿತು. ಎಂದಿಗೆ ಕಾಂಗ್ರೆಸ್ಸಿನ ಕತ್ತು ಹಿಸುಕುವೆನೋ ಎಂದು ಕಾದಿದ್ದ ಸರಕಾರವು, ಕಾಂಗ್ರೆಸ್ಸಿನಲ್ಲಿ ಉಂಟಾದ ಈ ಒಡಕನ್ನು ಕಂಡು, ತನ್ನ ಕಡು ವಿರೋಧಿಗಳಾದ ಉಗ್ರಗಾಮಿಗಳನ್ನು ದಂಡಿಸಲಾರಂಭಿಸಿ, ದಬ್ಬಾಳಿಕೆಯನ್ನು ನಡೆಯಿಸಿತು. ಆದರೆ, ಜನತೆಯ ಉತ್ಸಾಹ ನೂರ್ಮಡಿಯಾಯಿತಲ್ಲದೇ, ಕುಗ್ಗಲಿಲ್ಲ. ತರುಣರು ರೊಚ್ಚಿಗೆದ್ದರು. ಹಿಂಸಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡು ದಂಡಿಸುವ ಸರಕಾರದೊಡನೆ ಹಿಂಸಾತ್ಮಕ ಹೋರಾಟವನ್ನೇ ಹೂಡುವೆವೆಂದು ಪಣತೊಟ್ಟರು. ಗುಪ್ತವಾಗಿ ಬಾಂಬಿನ ಕಾರ್ಖಾನೆಗಳನ್ನು ನಿರ್ಮಿಸಿ, ಬಾಂಬುಗಳನ್ನು ಸಿದ್ಧಪಡಿಸತೊಡಗಿದರು. ಕೆಲವೆಡೆಗಳಲ್ಲಿ ಬಾಂಬು ಸ್ಫೋಟನವೂ ನಡೆಯಿತು. ಕ್ರಾಂತಿಕಾರರ ಮುಖಂಡರೆಂದು ಅರವಿಂದಘೋಷರನ್ನು ಸರಕಾರವು ಬಂಧಿಸಿತು. ಬಾಂಬುಗಳು ಬಿದ್ದ ಕಾರಣವನ್ನು ಶೋಧಿಸುವುದು ಯೋಗ್ಯ ಉಪಾಯವಲ್ಲದೇ, ಶಿಕ್ಷೆ ವಿಧಿಸುವುದು ಯೋಗ್ಯ ನಿವಾರಣೆಯಲ್ಲವೆಂಬುದಾಗಿ 'ಕೇಸರಿ'ಯಲ್ಲಿ ಸಂಪಾದಕೀಯ ಪ್ರಕಟವಾಯಿತು. ಸರಿ, ಇದೇ ಸಂದರ್ಭವನ್ನು ಸಾಧಿಸುತ್ತಿದ್ದ ಸರಕಾರವು ಕೂಡಲೇ, ಕ್ರಾಂತಿಕಾರಕ ಆಂದೋಲನದ ಮೂಲಪುರುಷರೆಂಬುದಾಗಿ ೧೯೦೮ರಲ್ಲಿ ಅವರ ಮೇಲೆ ರಾಜದ್ರೋಹದ ಆಪಾದನೆ ಹೊರಿಸಿ ನ್ಯಾಯಾಲಯಕ್ಕೆ ಅವರನ್ನೆಳೆದು ತರಿಸಿತು. ತನ್ನ ಇಪ್ಪತ್ತೊಂದು ಘಂಟೆಗಳ ಅಮೋಘ ಭಾಷಣದಲ್ಲಿ ತಿಲಕರವರು, ಈ ಖಟ್ಲೆಯಿಂದ ಮುದ್ರಣ ಸ್ವಾತಂತ್ರ್ಯದ ಅಪಹಾರವು ಹೇಗೆ ಆಗುವುದೆಂಬುದನ್ನು ಸಾರಿಹೇಳಿದರು.

ಈ ಭಾಷಣವು ಸರಕಾರದ ಮೇಲೆ ಪರಿಣಾಮ ಬೀರಿದಂತೆ ಕಾಣಲಿಲ್ಲ. ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಲೋಕಮಾನ್ಯರಿಗೆ ಆರು ವರ್ಷದ ಸಶ್ರಮ ಸಜೆ, ಒಂದುಸಾವಿರ ರೂಪಾಯಿ ದಂಡವನ್ನು ತೆರುವಂತೆ ವಿಧಿಸಿದರು. ತಿಲಕರಿಗೆ ಮಂಡಾಲೆಗೆ ಗಡಿಪಾರುಮಾಡುವಂತೆ ಆಜ್ಞೆಹೊರಟಿತು. "ನಾನು ಸ್ವತಂತ್ರನಾಗಿರುವುದಕ್ಕಿಂತ ಕಾರಾಗೃಹದಲ್ಲಿದ್ದರೇ ನನ್ನ ಕಾರ್ಯ ಜಯಶೀಲವಾಗುವುದೆಂದು ಪರಮಾತ್ಮನೆಣಿಸಿದಂತೆ ಕಾಣುತ್ತದೆ; ಅವನಿಚ್ಛೆಯಂತೆಯೇ ಆಗಲಿ!" ಎಂದು ಸಂತಸದಿಂದ ನುಡಿದು ಬರ್ಮಕ್ಕೆ ನಡೆದೇ ಬಿಟ್ಟರು! ಎಂತಹ ಧೈರ್ಯ! ಎಂತಹ ಅಸಾಮಾನ್ಯ ವ್ಯಕ್ತಿತ್ವ!

ಸರಕಾರದ ವರ್ತನೆಯನ್ನು ವೃತ್ತಪತ್ರಗಳು ತೀವ್ರವಾಗಿ ಖಂಡಿಸಿದುವು. ಕಾರಾಗೃಹದಲ್ಲಿರುವಾಗ ಹಿಂದಿನಂತೆಯೇ ಈಗಲೂ ತಿಲಕರು ಆಧ್ಯಾತ್ಮಿಕ ಜೀವನವನ್ನು ನಡೆಸತೊಡಗಿದರು. ವಿದೇಶೀ ವಿದ್ವಾಂಸರು ಹಿಂದೂಧರ್ಮದ ಮೇಲೆ ಮಾಡಿದ ಟೀಕೆಗಳನ್ನು ಖಂಡಿಸಲೋಸುಗ 'The Arctic Home of the Vedas' ಎಂಬ ಉದ್ಗ್ರಂಥವು ಈ ಮೊದಲೇ ಹೊರಬಿದ್ದಿತ್ತು. ಬರ್ಮಾದಲ್ಲಿರುವಾಗ, ರಾಷ್ಟ್ರಕ್ಕೆ ಆದರ್ಶ ಮಾರ್ಗದರ್ಶನಮಾಡಿಸಲು 'ಗೀತಾರಹಸ್ಯ'ವೆಂಬ ಮಹಾಗ್ರಂಥವೊಂದನ್ನು ತಿಲಕರು ವಿರಚಿಸಿದರು ಅವರ ಅಗಾಧ ಪಾಂಡಿತ್ಯಕ್ಕೆ ಎಲ್ಲರೂ ತಲೆದೂಗುವಂತಾಯಿತು. ತಿಲಕರ ಶೈಲಿಯು ಅಷ್ಟು ಅಮೋಘವಾದುದು! ಅವರು ಸನಾತನಧರ್ಮದ ಶ್ರೇಷ್ಠ ಪ್ರತಿಪಾದಕರೆಂದು 'ಗೀತಾರಹಸ್ಯ'ದಿಂದ ವ್ಯಕ್ತವಾಗುತ್ತದೆ.

೧೯೧೪ರಲ್ಲಿ ಶಿಕ್ಷೆ ಅಂತ್ಯವಾಗಿ ಲೋಕಮಾನ್ಯರು ಮಾತೃಭೂಮಿಗೆ ಮರಳಿದಾಗ ಕಂಗೆಟ್ಟ ಜನತೆ ಅವರ ಕಣ್ಣಿಗೆ ಬಿತ್ತು. ಕೂಡಲೇ ರಾಷ್ಟ್ರೀಯ ಚಳವಳಿಯ ಕರ್ಣಧಾರರಾದರು. ತನ್ಮಧ್ಯೆ ಪುಣೆ, ಬಂಗಾಲಗಳಲ್ಲಿ ಕೊಲೆಗಳು ನಡೆದುವು. ಇದಕ್ಕೆ ಮೂಲಕಾರಣರು ತಿಲಕರೇ ಎಂದು ಸರಕಾರವು ದೃಢವಾಗಿ ನಂಬಿತು. ಆದರೆ, ಲೋಕಮಾನ್ಯರು ತಾವು ಕ್ರಾಂತಿಕಾರಿಗಳಿರುವೆವೆಂದು ತಿಳಿಯುವುದು ಶುದ್ಧಮೂರ್ಖತನವೆಂದು ಮರಾಠಾಪತ್ರಿಕೆಯಲ್ಲಿ ಪ್ರಕಟಪಡಿಸಿದರು. ಭಾರತದಲ್ಲಿ ಆಗತಾನೇ ಡಾ! ಎನ್ನಿ ಬಿಸೆಂಟರ ನೇತೃತ್ವದಲ್ಲಿ 'ಹೋಮ್ ರೂಲ್' ಚಳವಳಿಯು ಆರಂಭವಾಗಿತ್ತು. ತಿಲಕರು ಈ ಚಳವಳದ ಪ್ರೋತ್ಸಾಹಕರಾದರು. "ಭಾರತದಲ್ಲಿ ಆಂಗ್ಲರಿ

ಗಿರುವಷ್ಟೇ ಹಕ್ಕು ಹಿಂದೀಯರಿಗೂ ಇರಬೇಕು" ಎಂಬುದೇ ಈ ಚಳವಳಿಯ ಮುಖ್ಯತತ್ವ. ಮಹಾರಾಷ್ಟ್ರದಲ್ಲಿ ತಿಲಕರಿಂದ "ಸ್ವರಾಜ್ಯ ಸಂಘ"ವು ಸ್ಥಾಪಿತವಾಯಿತು. 'ಸ್ವರಾಜ್ಯ'ವೆಂಬುದರ ನಿಜವಾದ ಅರ್ಥವನ್ನು ಜನತೆಗೆ ತಿಳಿಯಪಡಿಸಿ, ಅನ್ನ, ನೀರು, ವಾಯುಗಳಂತೆ ಅದೂ ಭಾರತೀಯ ಜನತೆಗೆ ಅತ್ಯಾವಶ್ಯಕವಾಗಿದೆಯೆಂದು ಸಾರಿದರು. ಇದರಿಂದ ರಾಷ್ಟ್ರದ ನರ ನಾಡಿಗಳಲ್ಲಿ ನವಶಕ್ತಿಯ ಸಂಚಾರವಾಯಿತು. ಬೆಳಗಾವಿಯಲ್ಲಿ ತಿಲಕರು ಮಾಡಿದ ಸ್ವರಾಜ್ಯದ ಪ್ರಚಾರ ಭಾಷಣದ ಮೇಲೆ ಸರಕಾರವು ರಾಜದ್ರೋಹದ ಆಪಾದನೆಯನ್ನು ಹೊರಿಸಿತು. ಮುಂದೆ ಹೈಕೋರ್ಟಿನಲ್ಲಿ ಲೋಕಮಾನ್ಯರ ನಿರಪರಾಧಿತ್ವ ವ್ಯಕ್ತವಾದರೂ, ಪಂಜಾಬ ಮತ್ತು ದೆಹಲಿಗಳಿಗೆ ಅವರಿಗೆ ಪ್ರವೇಶ ನಿರಾಕರಿಸಿತು ಸರಕಾರ.

ಮುಂದೆ ತೀವ್ರಗಾಮಿಗಳಿಗೂ ಮಂದಗಾಮಿಗಳಿಗೂ ಒಪ್ಪಂದವಾಯಿತು. ಮಹಮ್ಮದೀಯರ ರಾಷ್ಟ್ರೀಯ ಚಳವಳಿಯನ್ನು ಮನ್ನಿಸಿ ತಿಲಕರು ೧೯೧೬ರ ಲಖನೌ ಕಾಂಗ್ರೆಸ್ ಅಧಿವೇಶನದಲ್ಲಿ ಎಲ್ಲಾ ಪಕ್ಷದವರೊಂದಾಗಿ ಜಾತಿಭೇದವಿಲ್ಲದೇ ಎಲ್ಲರೂ ಸ್ವರಾಜ್ಯಕ್ಕಾಗಿ ಹೋರಾಡಬೇಕೆಂದು ಜನತೆಯನ್ನು ಕಳಕಳಿಯಿಂದ ಬಿನ್ನವಿಸಿದರು. ೧೯೧೪ರಲ್ಲಿ ಪ್ರಥಮ ಜಾಗತಿಕ ಮಹಾಸಮರವಾರಂಭವಾಯಿತು. ಸರಕಾರವು ಭಾರತೀಯರ ಸಹಕಾರ ಹಾಗೂ ಧನಸಹಾಯವನ್ನು ಕೇಳಿಕೊಂಡಿತು. ಮುಂಬಯಿಯಲ್ಲಿ ನೆರೆದ ಸಭೆಯೊಂದರಲ್ಲಿ ತಿಲಕರು, ಭಾರತಕ್ಕೆ ಸ್ವರಾಜ್ಯವನ್ನೀಯುವುದಾದಲ್ಲಿ ಜನತೆ ಮನಃಪೂರ್ವಕವಾಗಿ ಬ್ರಿಟನಿಗೆ ನೆರವು ನೀಡುವುದಾಗಿ ಭರವಸೆಯಿತ್ತರು. ಇದನ್ನು ಮುಂಬಯಿಯ ಗವರ್ನರ ವಿಲಿಂಗ್ಡನರು ಆಕ್ಷೇಪಿಸಿದುದರಿಂದ ತಿಲಕರೊಡನೆ ಅವರ ಪಕ್ಷದವರೂ ಕೂಡಲೇ ಸಭಾತ್ಯಾಗಮಾಡಿದರು. ವಚನವಿತ್ತ ಪ್ರಕಾರ ಭಾರತವು ಮಹಾಯುದ್ಧದಲ್ಲಿ ಬ್ರಿಟನಿಗೆ ಸಹಾಯಮಾಡಿದುದರಿಂದ ಕ್ರಮೇಣ ಭಾರತಕ್ಕೆ ಜವಾಬ್ದಾರಿ ಸರಕಾರದ ಘೋಷಣೆಮಾಡುವೆನೆಂದು ಆಂಗ್ಲ ಸರಕಾರ ಘೋಷಿಸಿತು. ಸ್ವರಾಜ್ಯಕ್ಕಾಗಿ ಚಳವಳಿ ಹೂಡಲು ತಿಲಕರು ಬ್ರಿಟನಿಗೆ ತೆರಳಿದರು. ಲೋಕಮಾನ್ಯರ ಚಳವಳಿಯು ಬ್ರಿಟನಿನ ರಾಜಕೀಯ ವಾತಾವರಣದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿತು. ಭಾರತದ ಬಗ್ಗೆ ಆಂದೋಲನ ಹೂಡಲು ಬ್ರಿಟನಿನ ಮಜೂರ ಪಕ್ಷ (Labour Party)ವು

ಒಡಂಬಟ್ಟಿತು. ಇದರಿಂದ, ತಿಲಕರ ಪ್ರಭಾವವು ಬ್ರಿಟನಿನ ಜನತೆಯ ಮೇಲೆ ಎಂತಹ ಪರಿಣಾಮ ಬೀರಿತ್ತೆಂಬುದು ವ್ಯಕ್ತವಾಗದಿರದು.

ವಾಲಂಟಾಯಿನ್ ಚಿರೋಲ್ ಎಂಬವನು ಪ್ರಸಿದ್ಧಿಸಿದ 'ಭಾರತದ ಅಸಂತೋಷ'ವೆಂಬ ಪುಸ್ತಕದಲ್ಲಿ ತಿಲಕರ ಮೇಲೆ ಹಲವು ಅಲ್ಲಸಲ್ಲದ ಅಪವಾದಗಳನ್ನು ಹೊರಿಸಿ, ಅವರು ರಾಜದ್ರೋಹಿಯೆಂಬುದಾಗಿ ಪ್ರಕಟಿಸಲಾಗಿತ್ತು. ತಿಲಕರು ಲೇಖಕರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದರು. ಅದು ಅವರಿಗೆ ಪ್ರತಿಕೂಲವಾಯಿತು. ವೃತ್ತಪತ್ರಗಳು ಇದನ್ನು ಖಂಡಿಸಿದುವು. ತಿಲಕರಿಗೆ ಜಯ ದೊರೆಯದಿದ್ದರೂ, ಆಂಗ್ಲ ನ್ಯಾಯಶಾಸ್ತ್ರದಲ್ಲಿ ಭಾರತೀಯರಿಗಿದ್ದ ನಂಬಿಕೆ ಮಾಯವಾಯಿತು. ತಿಲಕರು ಬ್ರಿಟನಿನಿಂದ ಭಾರತಕ್ಕೆ ಮರಳುವಾಗ ಭಾರತಾಂಬೆ ತನ್ನ ಭಾಗ್ಯಪುತ್ರನಿಗೆ ಆದರದ ಸ್ವಾಗತ ಬಯಸಿದಳು. ಅವರ ಷಷ್ಟ್ಯಬ್ದಿಯ ಸಮಾರಂಭದಲ್ಲಿ ಜನತೆ ಅವರಿಗೆ ಒಂದು ಲಕ್ಷ ರೂಪಾಯಿಯ ನಿಧಿಯೊಂದನ್ನು ಪ್ರೀತಿಪೂರ್ವಕವಾಗಿ ಸಮರ್ಪಿಸಿತು. ಉದಾರಿಗಳಾದ ಲೋಕಮಾನ್ಯರು ಈ ನಿಧಿಯನ್ನು ಹೋಮ್‌ರೂಲ್ ಲೀಗಿಗೆ ದಾನಮಾಡಿದರು.

೧೮೯೬ರಿಂದ ಲೋಕಮಾನ್ಯ ತಿಲಕರು ಭಾರತ ರಾಷ್ಟ್ರೀಯ ಕೊಂಗ್ರೆಸ್ಸಿನೊಂದಿಗೆ ಸಂಬಂಧವಿರಿಸಿಕೊಂಡಿದ್ದರು. ೧೯೧೮ರ ಕೊಂಗ್ರೆಸ್ ಅಧಿವೇಶನದ ಅಧ್ಯಕ್ಷಪಟ್ಟ ಅವರಿಗೆ ಸಮರ್ಪಿತವಾಯಿತು. ಆದರೆ ತಿಲಕರದನ್ನು ವಿನಯಪೂರ್ವಕವಾಗಿ ನಿರಾಕರಿಸಬೇಕಾಯಿತು. ಕಾರಣ, ಇಂಗ್ಲಂಡಿನಲ್ಲಿ ತಿಲಕರು ಕೊಂಗ್ರೆಸಿನ ಚಳವಳಿಯಲ್ಲಿ ನಿರತರಾಗಿದ್ದರು. ಗಾಂಧೀಜಿಯವರಿಗೆ ತಿಲಕರಲ್ಲಿ ಅನುಪಮವಾದ ಗೌರವವಿತ್ತು. ದಕ್ಷಿಣ ಆಫ್ರಿಕದಲ್ಲಿ ಚಳವಳಿ ನಡೆಯಿಸಲು ಬೆಂಬಲ ದೊರಕಿಸಿಕೊಳ್ಳಲೋಸುಗ ಗಾಂಧೀಜಿ ತಿಲಕರನ್ನು ಭೇಟಿಯಾದರು. ಗಾಂಧೀಜಿಯವರ ಯೋಜನೆಗೆ ತಿಲಕರ ಪೂರ್ಣ ಸಹಾನುಭೂತಿ ದೊರೆಯಿತು. ೧೯೦೧ರ ಕೊಂಗ್ರೆಸ್ ಅಧಿವೇಶನಕ್ಕೆ ಗಾಂಧೀಜಿ ಕೂಡ ಹೋಗಿದ್ದರು. ಅಲ್ಲಿ ತಿಲಕರ ಗಟ್ಟಿಯಾದ ಗಹಗಹ ನಗು, ಸರಕಾರದ ಕೆಟ್ಟವರ್ತನೆಯನ್ನು ನಿರ್ಭೀತಿಯಾಗಿ ಖಂಡಿಸುತ್ತಿದ್ದ ಅವರ ವ್ಯಕ್ತಿತ್ವದಿಂದ ಗಾಂಧೀಜಿ ಅಚ್ಚರಿಗೊಂಡಿದ್ದರು. ಕೆಲವೊಮ್ಮೆ ಮಹಾತ್ಮರ ಸತ್ಯಾಗ್ರಹವನ್ನು ಮಾತ್ರ ತಿಲಕರು ಮೆಚ್ಚುತ್ತಿರಲಿಲ್ಲ. ಆದರೆ ಗಾಂಧೀಜಿಯವರು ಲೋಕಮಾನ್ಯರ ರಾಜಕೀಯ

ಉತ್ತರಾಧಿಕಾರಿಯಾಗಿದ್ದರು. ಆದರ ಬಗ್ಗೆ ಗಾಂಧೀಜಿಯವರೇ ಒಮ್ಮೆ, "ತಿಲಕರ ಉತ್ತರಾಧಿಕಾರಿಯಾಗಿರುವ ನಾನು, ಅವರು ನನಗಾಗಿ ಮಾಡಿಟ್ಟು ಹೋದ ಪಿತ್ರಾರ್ಜಿತಕ್ಕೆ ನನ್ನ ಸ್ವಂತ ಪಾಲನ್ನು ಸೇರಿಸದಿದ್ದರೆ, ನಾನು ಯೋಗ್ಯ ಪಿತನ ಯೋಗ್ಯ ಪುತ್ರನೆನ್ನಿಸಲಾರೆ" ಎಂಬುದಾಗಿ ಹೇಳಿದ್ದಾರೆ.

೧೯೧೯ರಲ್ಲಿ ಪಂಜಾಬದಲ್ಲಿ ಭೀಕರ ಹತ್ಯಾಕಾಂಡ ನಡೆದು ಜನತೆ ಸರಕಾರದ ವರ್ತನೆಯಿಂದ ರೊಚ್ಚಿಗೆದ್ದಿತ್ತು. ೧೯೧೯ರ ಅಮೃತಸರ ಕೊಂಗ್ರೆಸಿನಲ್ಲಿ ಈ ಹತ್ಯಾಕಾಂಡವು ನಿಷೇಧಿಸಲ್ಪಟ್ಟಿತಲ್ಲದೆ ಜನರಲ್ ಡಾಯರನಿಗೆ ಶಿಕ್ಷೆಯಾಗಬೇಕೆಂಬುದಾಗಿ ಗೊತ್ತುವಳಿ ಮಂಜೂರಾಯಿತು. ಆದರೆ, ಪಂಜಾಬಿನ ಅತ್ಯಾಚಾರದ ವಿಷಯದಲ್ಲಿ ಏನೂ ವಿಚಾರಣೆ ನಡೆಯುಲಿಲ್ಲ. ಮಹಾತ್ಮಾಜಿ ಅಸಹಕಾರವಾದಿಯಾಗಿ, ಅಸಹಕಾರದ ರಣಕಹಳೆಯನ್ನೂದಿದರು. ೧೯೨೦ರ ಆಗಸ್ಟ್ ೧ರಂದು ಚಳವಳವು ಆರಂಭವಾಗಲಿತ್ತು. ಲೋಕಮಾನ್ಯರು ಅಕಸ್ಮಾತ್ ಬೇನೆಬಿದ್ದರು. ಅವರ ಅಸ್ವಸ್ಥದ ಸುದ್ದಿ ಕೇಳಿದೊಡನೆ ಗಾಂಧೀಜಿ ಮುಂಬಯಿಯ ಸರ್ದಾರ್ ಗೃಹಕ್ಕೆ ಧಾವಿಸಿದರು. ಮಹಾತ್ಮಾಜಿಯವರನ್ನು ಕಂಡೊಡನೆ ತಿಲಕರ ನಯನಗಳು ಅಶ್ರುಪೂರಿತವಾದುವು. ಮಹಾತ್ಮಾಜಿಯವರ ತೊಡೆಯ ಮೇಲೆ ಮಸ್ತಕವನ್ನಿರಿಸಿ, "ಸ್ವರಾಜ್ಯ ದೊರೆಯದೆ ಇದ್ದರೆ, ಭಾರತವು ಏಳ್ಗೆ ಹೊಂದಲಾರದು; ಭಾರತದ ಅಸ್ತಿತ್ವಕ್ಕೆ ಸ್ವರಾಜ್ಯ ಅತ್ಯವಶ್ಯಕ" ಎಂದು ಚಿರಸ್ಮರಣೀಯವಾದ ಅಮೃತ ವಚನವನ್ನಾಡಿ, ತಂದೆಯು ತನ್ನ ಹಕ್ಕುಗಳನ್ನೆಲ್ಲಾ ಮಗನಿಗೊಪ್ಪಿಸಿ ತಾನು ಅಗಲುವಂತೆ—ತಿಲಕರು ತನ್ನ ಮುಂದಿನ ಕಾರ್ಯಭಾಗಗಳನ್ನೆಲ್ಲ ಗಾಂಧಿಜಿಯುವರಿಗೊಪ್ಪಿಸಿ ಪರಮಾತ್ಮನಲ್ಲಿ ಐಕ್ಯರಾದರು. ತಮಗಾಗಿ ಸವೆಸಿದ ಲೋಕಮಾನ್ಯನ ಪವಿತ್ರ ಶರೀರವನ್ನು ನೋಡಿದ ಜನತೆ ಮಮ್ಮಲ ಮರುಗಿತು. ತನ್ನ ಭಾಗ್ಯಪುತ್ರನ ನಿಧನದಿಂದಾಗಿ ಭಾರತಮಾತೆ ಪುತ್ರಶೋಕದಿಂದ ಬೆಂದಳು ಗಾಂಧೀಜಿಯುವರಿಗೆ ತನ್ನ ನಿಸ್ಸಹಾಯಕತೆ ಕಣ್ಣೆದುರು ತಾಂಡವವಾಡತೊಡಗಿತು. ದುಃಖಪೂರಿತವಾಗಿ ಅವರೆಂದರು: "ನನ್ನ ಅತಿ ದೊಡ್ಡ ಆಧಾರಸ್ತಂಭ ಕುಸಿಯಿತು. ಲೋಕಮಾನ್ಯರಂತಹ ಧೈರ್ಯವಂತರು ಬೇರಿಲ್ಲ. ಅವರಷ್ಟು ಸಮರ್ಥವಾಗಿ ಸ್ವರಾಜ್ಯ ಮಂತ್ರೋಪದೇಶ ಮಾಡಿದವರಿಲ್ಲ! ಅವರು ನಿರಂಕುಶ ಪ್ರಭುತ್ವದ ಮಹಾಶತ್ರು ಅವರ ದೇಶಪ್ರೇಮ ಮತ್ತು ಧೈರ್ಯ ಮೊದಲಾದುವುಗಳನ್ನು ನಮ್ಮ ಜೀವನದಲ್ಲಿ

ಆಚರಣೆಗೆ ತಂದು, ಭಾರತೀಯರಾದ ನಾವೇ ಅವರಿಗೆ ಚಿರಸ್ಮಾರಕವಾಗುವೆವು."

ಶವಯಾತ್ರೆಗೆ ಆರಂಭವಾದಾಗ ಲೋಕಮಾನ್ಯರ ಶವಪೆಟ್ಟಿಗೆಗೆ ಹೆಗಲೊಡ್ಡಲು ಮಹಾತ್ಮರು ಮುಂದಾದರು. ಆದರೆ ಗಾಂಧೀಜಿ ಬ್ರಾಹ್ಮಣನಲ್ಲವಾದುದರಿಂದ ಆ ಕಾರ್ಯಕ್ಕೆ ಅವರು ಅಯೋಗ್ಯರೆಂದು ಸನಾತನಿ ಹಿಂದುವೊಬ್ಬನು ಹೇಳಿದನು. ಸ್ವಲ್ಪ ಹೊತ್ತು ಆಲೋಚಿಸಿ, ಗಾಂಧೀಜಿಯವರು, "ರಾಜಕಾರಣಿಗಳು ಜಾತಿಮತಗಳ ಭೇದಗಳನ್ನೆಣಿಸಲಾರರು" ಎಂದು ಹೇಳಿ ಒಂದು ಬದಿಯನ್ನು ಹೆಗಲ ಮೇಲಿರಿಸಿಕೊಂಡಾಗ, ಇನ್ನೊಂದು ಬದಿಗೆ ಮೌಲಾನಾ ಶೌಕತ್ ಆಲಿಯವರು ಹೆಗಲೊಡ್ಡಿದರು. ಲೋಕಮಾನ್ಯರ ಆದರ್ಶಪ್ರಾಯವಾದ ಪರಮ ಪವಿತ್ರ ಜೀವನವು ಮುಂದೆ ರಾಷ್ಟ್ರೀಯ ಚಳವಳಿಯಲ್ಲಿ ಮುಂದಿನ ಪೀಳಿಗೆಗೆ ಸ್ಫೂರ್ತಿಯನ್ನಿತ್ತು ಭಾರತದ ಸ್ವಾತಂತ್ರ್ಯಲಾಭಕ್ಕೆ ಕಾರಣವಾಯಿತೆಂಬುದು ನಿರ್ವಿವಾದ. ಲೋಕಮಾತ್ಯರ ಪ್ರಾತಃಸ್ಮರಣೀಯ ವ್ಯಕ್ತಿತ್ವದ ಚಿರಸ್ಮಾರಕಕ್ಕಾಗಿ ಅವರ ಶವದಹನ ಮಾಡಿದ ಸ್ಥಳದಲ್ಲಿ ಸ್ಥಾಪಿಸಿದ ಅವರ ಜೀವಪ್ರಮಾಣದ ಶಿಲಾಪ್ರತಿಮೆಯನ್ನು ನಾವು ಮುಂಬಯಿಯಲ್ಲಿ ಕಾಣಬಹುದು. ಅವರ ಜೀವನದಿಂದ ಭಾರತದ ಘನತೆ ತೋರಿತು. ಗಾಂಧೀಜಿ ನುಡಿದಂತೆ ಅವರ ಸ್ಮಾರಕವಾದ ನಾವಿಂದು ನಮ್ಮ ರಾಷ್ಟ್ರದ ಉದ್ಧಾರಕ್ಕಾಗಿ ಬದ್ಧಕಂಕಣರಾಗೋಣ!

೧೯೫೬ರ ಜುಲಾಯಿ ೨೩ರಂದು ಭಾರತರಾಷ್ಟ್ರವು ಆಚರಿಸಿದ ತಿಲಕರ ಜನ್ಮಶತಾಬ್ದಿಯ ಉತ್ಸವ ಸಮಯದಲ್ಲಿ ರಾಷ್ಟ್ರೀಯ ಧುರೀಣರು ರಾಷ್ಟ್ರಕ್ಕಿತ್ತ

ಸಂದೇಶಗಳು

"ತಿಲಕರ ಜೀವನದಿಂದ ಸ್ಫೂರ್ತಿಪಡೆಯಿರಿ"

"ಭಾರತದ ಚರಿತ್ರೆಯಲ್ಲಿ ಭಾರತದ ಅಗ್ರಗಣ್ಯ ಧುರೀಣರಾಗಿ ರಾರಾಜಿಸತಕ್ಕ ವ್ಯಕ್ತಿ ತಿಲಕರು; ಭಾರತೀಯರ ಮಹಾನ್ ನಾಯಕನಾಗಿ

ಅವರು ರಾಷ್ಟ್ರಕ್ಕೆ ಸುಪರಿಚಿತರು; ಪೂರ್ಣ ಸ್ವರಾಜ್ಯದ ಪ್ರಚೋದಕರು. ಸಂಸ್ಕೃತದಲ್ಲಿ ಅವರು ಘನ ವಿದ್ವಾಂಸರು. ಸೆರೆಮನೆಯಲ್ಲಿದ್ದಾಗ ಭಗವದ್ಗೀತೆಯ ಮೇಲೆ ಅವರು ಬರೆದ ಟಿಪ್ಪಣಿ ಗೀತೆಯ ಪ್ರಸಿದ್ಧ ಟಿಪ್ಪಣಿಗಳಲ್ಲೊಂದಾಗಿ ಪರಿಗಣಿತವಾಗಿದೆ. ಅವರ ಜನ್ಮ ಶತಾಬ್ದಿಯ ಈ ಸಂತೋಷ ಕಾಲದಲ್ಲಿ, ಅವರ ಜೀವನವನ್ನು ಅಧ್ಯಯನ ಮಾಡಿ, ಅದರಿಂದ ಸ್ಫೂರ್ತಿಪಡೆಯಿರೆಂದು ದೇಶಬಾಂಧವರಿಗೆ ನನ್ನ ಸೂಚನೆ.

—ರಾಷ್ಟ್ರಪತಿ ರಾಜೇಂದ್ರ ಪ್ರಸಾದ.

"ಭಾರತದ ರಾಷ್ಟ್ರೀಯತೆಯ ಮೂರ್ತಿಸ್ವರೂಪರು"

"ತಿಲಕರಂಥ ಮಹಾಪುರುಷರನ್ನು ಅಳೆಯುವುದು ನಮ್ಮಿಂದ ಸಾಧ್ಯವಾಗದು. ನನ್ನ ಮೇಲೆ ಅವರ ಪ್ರಭಾವವು ತುಂಬಾ ಬಲವಾಗಿದೆಯೆಂಬುದು ನನಗೀಗಲೂ ನೆನಪಿದೆ; ಅವರು ನನ್ನ ಪಾಲಿಗೆ ಭಾರತದ ರಾಷ್ಟ್ರೀಯತೆಯ ಮೂರ್ತಿಸ್ವರೂಪರಾಗಿದ್ದರು. ಅವರ ಮಹತ್ಸಾಧನೆಯ ಫಲಿತಾಂಶವಾಗಿ ಭಾರತವಿಂದು ಸ್ವತಂತ್ರವಾಗಿದೆ ಅವರ ಸ್ಮರಣೆಯುಂಟಾದಾಗ ಈಗ ನಮ್ಮ ಮುಂದಿರುವ ಮಹತ್ಕಾರ್ಯ ಸಾಧನೆಗೆ ಶಕ್ತಿ ಮತ್ತು ಧೈರ್ಯವುಂಟಾಗುತ್ತದೆ.

—ಪ್ರಧಾನಿ ಪಂಡಿತ ಜವಹರಲಾಲ ನೆಹರು.

"ಧೈರ್ಯ ಹಾಗೂ ತ್ಯಾಗದ ಪ್ರತಿಮೂರ್ತಿ"

"ದೇಶಪ್ರೇಮದ ಉಜ್ವಲ ಉದಾಹರಣೆಯಾಗಿ ಧೈರ್ಯ ತ್ಯಾಗಗಳ ಪ್ರತಿಮೂರ್ತಿಯಾಗಿ ತಿಲಕರು ಜನಮನದಲ್ಲಿ ಶೋಭಿಸುವರು. "ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು" ಎಂದು ಸಿಂಹಘರ್ಜನೆ ಮಾಡಿದ ಮಹಾತ್ಮರವರು. ದೇಶದ ಸ್ವಾತಂತ್ರ್ಯಕ್ಕಾಗಿ ಎಂತಹ ಕಷ್ಟವನ್ನಾದರೂ ಸಹಿಸಿ ಮುಂದರಿದವರು. ಅವರ ಸ್ಪರ್ಶದಿಂದ ಪ್ರತಿಯೋರ್ವನಲ್ಲೂ ಧೈರ್ಯ ಮತ್ತು ತ್ಯಾಗಭಾವನೆಯು ಉಂಟಾಗುತ್ತಿತ್ತು."

—ಕೊಂಗ್ರೆಸ್ ಅಧ್ಯಕ್ಷ ಉಚ್ಛಂಗರಾಯ್ ನವಲಶಂಕರ ದೇಬರ್.

"ರಾಷ್ಟ್ರಸ್ವಾತಂತ್ರ್ಯದ ಶಿಲ್ಪಿ"

"ರಾಷ್ಟ್ರದ ಜೀವನದಲ್ಲಿ ಕತ್ತಲು ಕವಿದಾಗ ಸ್ವಾತಂತ್ರ್ಯಾಪೇಕ್ಷೆಯನ್ನು ಕೆರಳಿಸಿದವರಲ್ಲಿ ಲೋಕಮಾನ್ಯ ತಿಲಕರು ಮೊದಲಿಗರು. ರಾಷ್ಟ್ರಸ್ವಾತಂತ್ರ್ಯದ ಪ್ರಮುಖ ಶಿಲ್ಪಿ ಅವರು."

—ಗೃಹಮಂತ್ರಿ ಪಂಡಿತ್ ಗೋವಿಂದ ವಲ್ಲಭ ಪಂತ.

Edited, Printed & Published by K. V. Shenoy
at The Prabhat Printers, Ltd., Mangalore.